

ಅತ್ತ ದರಿ, ಇತ್ತ ಪುಲಿ ಈ ಸರ್ಕಸ್ ಸಾಹಸಿಗನ ಪರಿಸ್ಥಿತಿ. ಚೀನಾದ ಮೃಗಾಲಯದ ಹುಲಿಗಳ ಡೆನ್‌ನಲ್ಲೇ ಹಗ್ಗದ ಮೇಲೆ ಕಸರತ್ತು ನಡೆಸಿದವನ ಗುಂಡಿಗೆ ಗಟ್ಟಿ ಇರಲೇಬೇಕು. ಜಾರಿ ಬಿದ್ದರೆ ತಲೆ ನೆಲಕ್ಕೆ ಕುಟ್ಟುವ ಬದಲು ಹುಲಿಯ ಬಾಯಿಗೆ. ಈ ಹಗ್ಗ ಮುಂದುವರಿದು ನದಿಯ ಮೇಲೆ ತೂಗುಯ್ಯಾಲೆ. ಕೆಳಗೆ ಮೊಸಳೆಗಳ ಹಸಿದ ಹೊಟ್ಟೆ. ಆದರೆ ಟ್ರಯಲ್ ನೋಡಿದ ಮಾಧ್ಯಮದವರು ಈಗ ಸಾಹಸಕ್ಕೆ ತಡೆ ತಂದಿದ್ದಾರಂತೆ.

ಹೃದಯ- ಹೃದಯಗಳನ್ನು ಬೆಸೆಯುವ ಮೊಬೈಲ್‌ನ ಹೃದಯ ಭಾಗ ಸಿಮ್ ಕಾರ್ಡ್ ಈ ನೀರೆಯ ಹೃದಯಭಾಗದಲ್ಲೇ ಕುಳಿತಿದೆ. ಟೊರೆಂಟೋದಲ್ಲಿ ಮೊಬೈಲ್ ಕಂಪೆನಿಯೊಂದು ಪ್ರಚಾರಕ್ಕಾಗಿ ಸಿಮ್ ಕಾರ್ಡ್‌ಗಳ ಕಂಚುಕವನ್ನೇ ಮಾಡಿ ಫ್ಯಾಷನ್ ಷೋ ನಡೆಸಿತು. ಡ್ಯೂಯಲ್ ಸಿಮ್ ಕಾರ್ಡ್ ಇದ್ದರೆ ಇಬ್ಬರು ಒಂದೇ ಬಾರಿ ಹುಡುಗಿಗೆ ಕರೆ ಮಾಡಿ ಆನಂದಿಸಬಹುದು. ಆದರೆ ಇಲ್ಲಿ ಎಷ್ಟು ಮಂದಿ ಬೇಕಾದರೂ ಕರೆಗಳ ಸುರಿಮಳೆ ಮಾಡಬಹುದು. ಆದರೆ ಉತ್ತರಿಸುವ ಬಾಯಿ ಮಾತ್ರ ಒಂದೇ.



ಹಣವಿಲ್ಲದಿದ್ದರೆ ಏನು ಮಾಡಬೇಕು? ಮದುವೆಯಾಗಿಬಿಡಬೇಕು. ಪ್ರತಿಭಟನೆ ಮಾಡುವುದಿದ್ದರೆ ಏನು ಮಾಡಬೇಕು? ಅದಕ್ಕೂ ಮದುವೆಯಾಗಿ ಬಿಡಬೇಕು. ಅಡಿಲೇಡ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ವಿಶ್ವವಿದ್ಯಾನಿಲಯ ನೀಡುವ ವಿದ್ಯಾರ್ಥಿ ವೇತನ ಕಡಿಮೆಯಾಯಿತೆಂದು ಪ್ರತಿಭಟಿಸಲು ಮದುವೆ ಮಾಡಿಕೊಂಡರು. ಅಡ್ಡಿಯಿಲ್ಲ, ಮುಂದೆ ಮಗುವಿಗೂ ಭತ್ಯೆ ಕೇಳಲು ಯಾವ ರೀತಿ ಪ್ರತಿಭಟಿಸುತ್ತಾರೋ?

ಚೀನಾದ ಯುನಾನ್ ಥೀಮ್‌ಪಾರ್ಕ್‌ನಲ್ಲಿ ಈಗ ಕುಳ್ಳರದ್ದೇ ಕಾರುಬಾರು. ಅಲ್ಲಿ ತಲೆ ಎತ್ತಿರುವ 'ಕುಳ್ಳರ ಸಾಮ್ರಾಜ್ಯ' ದಲ್ಲಿ ಎತ್ತರ ಕಡಿಮೆ ಇರುವವರ ಕಸರತ್ತು ನೋಡಲು ನೂಕುನುಗ್ಗಲಂತೆ. ಆದರೆ ಇದು ಮಾನವರ ಅಪಹಾಸ್ಯ ಎಂದು ಮಾನವ ಹಕ್ಕು ಹೋರಾಟಗಾರರು ಬೀದಿಗಿಳಿದಿದ್ದಾರೆ. ಹೇಗಾದರೂ ಕಾಸು ಮಾಡಿ ಅನ್ನ- ಬಟ್ಟೆ ಹೊಂದಿಸಿಕೊಳ್ಳುವವರ ಹೊಟ್ಟೆ ಮೇಲೆ ಕಲ್ಲು ಎಂದು ಇನ್ನೊಂದು ಕಡೆ ಹುಯ್ಲು. ಇಬ್ಬರ ಮಧ್ಯೆ ಕುಳ್ಳರು ಕಾಣುತ್ತಾರಾ?



ದೂರವಾಯ್ತೆಂದು ಬೆಂಗಳೂರಿನಲ್ಲಿರುವ ಪತ್ನಿಗೆ ವಿಚ್ಛೇದನ ನೀಡುವ ಮುಂಬೈವಾಲಾ- ಇದು ನಮ್ಮಲ್ಲಿ ಸುದ್ದಿಯಾಗುತ್ತದೆ. ಕ್ರಯೋಷಿಯಾದಲ್ಲಿರುವ ಅಂಗವಿಕಲ ಪ್ರಿಯತಮೆಗಾಗಿ ಸಾವಿರಾರು ಮೈಲುಗಳನ್ನು ಹಾರಿ ಬರುವ ದಕ್ಷಿಣ ಆಫ್ರಿಕಾದ ಗಂಡು ಕೊಕ್ಕರೆಯ ಸುದ್ದಿ ಪ್ರಕಟವಾಗಿದ್ದು ಕ್ರಯೋಷಿಯ ಮಾಧ್ಯಮದಲ್ಲಿ. ಸತತ ಐದನೇ ವರ್ಷವೂ ಈ ಕೊಕ್ಕರೆ ಆಗಮಿಸಿದ್ದು ಸಂತಾನೋತ್ಪತ್ತಿಗಾಗಿ ಸಿದ್ಧತೆ ನಡೆಸಿದೆಯಂತೆ.



ಸ್ವಿಝರ್ಲೆಂಡ್‌ನ ಈ ಅಜ್ಜಿಗೆ ಎರಡು ಶತಮಾನಗಳ ನಂತರವೂ ಹುಟ್ಟುಹಬ್ಬದ ಕೇಕ್ ಕತ್ತರಿಸುವ ಸಂಭ್ರಮ. ಹುಟ್ಟಿದ್ದು 19ನೇ ಶತಮಾನದ ಕೊನೆ. 112ನೇ ಹುಟ್ಟುಹಬ್ಬ 21ನೇ ಶತಮಾನದಲ್ಲಿ. ಅಜ್ಜಿ ರೋಸಾ ಈ ವಯಸ್ಸಿನಲ್ಲೂ ಡ್ರಿಂಕ್ಸ್ ಹಿಡಿದು ಚೀಯರ್ಸ್ ಎನ್ನುವುದು ನೋಡಿದರೆ 112ರ ಗುಟ್ಟು ವ್ಯಾಟ್ 69 ಇರಬಹುದು.



ಥಾಯ್ಲೆಂಡ್‌ನಲ್ಲಿ ಪೊಲೀಸರನ್ನು ನಂಬದ ಜನರಲ್ಲಿ ಮಂಗ ವಿಶ್ವಾಸ ಮೂಡಿಸಲು ಯತ್ನಿಸುತ್ತಿದೆಯಂತೆ. ನಿತ್ಯ ಅಲ್ಲಿಯ ಸೈಬುರಿ ನಗರದಲ್ಲಿ ಪೊಲೀಸರ ಜೊತೆ ಗಸ್ತು ತಿರುಗುತ್ತಿದೆ. ಮಾನವರು ಮಾನವರನ್ನು ನಂಬದ ಈ ಕಾಲದಲ್ಲಿ ತಮ್ಮ ಪೂರ್ವಜನನ್ನು ನಂಬದಿರುತ್ತಾರೆಯೇ ಎಂಬುದು ಅಲ್ಲಿಯ ಪೊಲೀಸರ ತರ್ಕ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65